# ಕಬ್ಬಿಣದ ಮನುಷ್ಯ ನಿದಾಲ್



ಅಡುಗೆಯಲ್ಲಿ ನಿರತರಾದ ನಿದಾಲ್

ಅದು 2014ರ ಇಸವಿ. ಇಸ್ರೇಲ್ ಸೇನೆ ಗಾಜಾ ಪಟ್ಟಿಯ ಮೇಲೆ ಅಂದು ನಡೆಸಿದ ವಾಯು ದಾಳಿಯಲ್ಲಿ ನೂರಾರು ಪ್ಯಾಲೆಸ್ಟೀನಿಯರು ಮಡಿದಿದ್ದರು. ಸಾವಿರಾರು ಜನರು ಗಾಯಗೊಂಡರೆ, ಅನೇಕ ಕುಟುಂಬಗಳು ಬೀದಿಗೆ ಬಿದ್ದಿದ್ದವು. ನಿರಂತರ ವೈಮಾನಿಕ ದಾಳಿಯಿಂದಾಗಿ ಭೂಮಿಯೂ ಸತ್ವ ಕಳೆದುಕೊಂಡಿತು. ಅಲ್ಲಿನ ಜನರ ಬದುಕು ಮೂರಾಬಟ್ಟೆಯಾಗಿತು. ಇಂತಹ ದಾಳಿಯ ಸಂದರ್ಭದಲ್ಲೂ, ತನ್ನ ದೇಹಕ್ಕೆ 400ಕ್ಕೂ ಹೆಚ್ಚಿನ ಕಬ್ಬಿಣದ ಚೂರುಗಳು ಹೊಕ್ಕರೂ ಜೀವಂತವಾಗಿ ಉಳಿದ ವ್ಯಕ್ತಿ ನಿದಾಲ್ ಕ್ರಯೆಮ್!

ನಿದಾಲ್ ಬದುಕುಳಿದರೂ ತನ್ನ ಒಡಹುಟ್ಟಿದ ಅಣ್ಣನನ್ನು ಕಳೆದುಕೊಂಡರು. ಒಂದು ತಿಂಗಳು ಕೋಮಾದಲ್ಲಿದ್ದ ನಿದಾಲ್ ಸಾವನ್ನೂ ಗೆದ್ದುನಿಂತರು. ಭಯ, ಅಭದ್ರತೆ, ಅನಿಶ್ಚಿತತೆಯ ವಾತಾವರಣದಿಂದ ದೂರ ಹೋಗಲು ಬಯಸಿದ್ದ ಅವರು, ಉನ್ನತ ಶಿಕ್ಷಣವನ್ನು ಪೂರೈಸಲು ಆಯ್ಕೆ ಮಾಡಿಕೊಂಡ ದೇಶ ಭಾರತ. ಭಾರತದಲ್ಲಿ ಅವರ ಆಯ್ಕೆ ಮೈಸೂರು.

ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಸಾಹಿತ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ನಿದಾಲ್ ಅವರ ಹಿಂದಿನ ಜೀವನ ನೋವು, ಯಾತನೆ ಹಾಗೂ ರೋಚಕತೆಯಿಂದ ಕೂಡಿದ್ದು.

"ಸಾವಿನ ಸನಿಹ ಹೋಗಿ ಬಂದ ನನಗೆ, ಆ ಜಗತ್ತಿನಿಂದ ದೂರ ಸರಿಯಬೇಕೆಂದು ಎನಿಸಿತ್ತು. ಆದರೆ ಅದು ಅಷ್ಟು ಸುಲಭದ ಕೆಲಸವೂ ಅಲ್ಲ ಎಂಬುದು ಗೊತ್ತಾಯಿತು. ಜನ್ಮವಿತ್ತ ತಾಯಿ, ತಾಯ್ನಾಡನ್ನು ಮರೆಯಲು, ಭವಬಂಧದ ಕೊಂಡಿಯನ್ನು ಕಳಚಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಉನ್ನತ ಶಿಕ್ಷಣ ಮಾಡುವ ಆಸೆ ಚಿಗುರೊಡೆದಾಗ, ಅದಕ್ಕೆ ಸೂಕ್ತ ಜಾಗ ಭಾರತ ಎಂದು ನನ್ನ ತಂದೆ ಹೇಳಿದ್ದರು. ಅದು ಶಾಂತಿಯ ನೆಲೆವೀಡು. ಬಹುಸಂಸ್ಕೃತಿಗಳ ನಾಡು. ಮೇಲಾಗಿ ಅಲ್ಲಿನ ಜನರ ಭಾವನೆಗಳಿಗೂ ನಮ್ಮ ಭಾವನೆಗಳಿಗೂ ಸಾಮ್ಯತೆ ಇದೆ ಎಂದಿದ್ದರು. ಹೀಗಾಗಿ ಭಾರತಕ್ಕೆ ಬಂದೆ" ತನ್ನ ಹಿನ್ನೆಲೆಯನ್ನು ಬಿಚ್ಚಿಟ್ಟರು. ನಿದಾಲ್‌ಗೆ ಇಲ್ಲಿ ಯಾವ ಸಮಸ್ಯೆಯೂ ಇಲ್ಲ. ಬಾಂಬ್ ಹಾಕುತ್ತಾರೆ ಎಂಬ ಭಯವೂ ಇಲ್ಲ. ಆದರೆ, ಗಾಜಾದಲ್ಲಿ ಅನಿಶ್ಚಿತತೆ, ಭಯದ ವಾತಾವರಣದಲ್ಲಿ ಬದುಕುತ್ತಿರುವ ಕುಟುಂಬದ ಸದಸ್ಯರದ್ದೇ ಚಿಂತೆ. ಇದರ ನಡುವೆಯೂ ಹೊಸ ಜೀವನದ ಬಯಕೆ ಹೊತ್ತು ಸಾಗುತ್ತಿದ್ದಾರೆ. ಕಲಿಕೆ ಮೂಲಕ ಕಹಿಘಟನೆ ಮರೆಯಲು ಪ್ರಯತ್ನಿಸುತ್ತಿದ್ದಾರೆ.

ಭಾರತ ಸುರಕ್ಷಿತ ಪ್ರದೇಶ ಎನಿಸಿದರೂ ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಆರಂಭದಲ್ಲಿ ತಿಣುಕಾಡಿದ್ದರಂತೆ. ಭಾಷೆ, ಆಹಾರ ಪದ್ಧತಿ ಅವರಿಗೆ ಗಂಭೀರವಾಗಿ ಕಾಡಿದ ಸಮಸ್ಯೆಗಳಂತೆ. "ಇಲ್ಲಿನ ಬಹುತೇಕರು ಕನ್ನಡ ಮಾತನಾಡುತ್ತಾರೆ. ಇಂಗ್ಲಿಷ್ ಮಾತನಾಡಿದರೂ ಅದರ ಉಚ್ಚಾರಣೆಗೂ ನಮ್ಮ ಇಂಗ್ಲಿಷ್ ಉಚ್ಚಾರಣೆಗೂ ಬಹಳ ವ್ಯತ್ಯಾಸವಿದೆ. ಹೀಗಾಗಿ, ಆರಂಭದ 3ರಿಂದ 4 ತಿಂಗಳು ಭಾಷಾ ಸಮಸ್ಯೆ ಎದುರಿಸಿದ್ದೆ' ಎನ್ನುತ್ತಾರೆ.

"ಇಲ್ಲಿನ ಆಹಾರದಲ್ಲಿ ಉಪ್ಪು, ಖಾರ, ಮಸಾಲೆ ಜಾಸ್ತಿ. ಆದರೆ, ನಮ್ಮ ಆಹಾರದಲ್ಲಿ ಮಸಾಲೆ ಕಡಿಮೆ. ಗಮನಾರ್ಹ ವಿಷಯವೆಂದರೆ, ನಮ್ಮ ಕಡೆ ಅಡುಗೆ ಎಣ್ಣೆ ಬಳಕೆ ತೀರಾ ಕಡಿಮೆ. ಭಾರತೀಯರು ಎಣ್ಣೆ ಪದಾರ್ಥಗಳ ಸೇವನೆ ಕಡಿಮೆ ಮಾಡಬೇಕು' ಎಂಬ ಸಲಹೆಯನ್ನೂ ನೀಡುತ್ತಾರೆ.

ಮೈಸೂರಿನಲ್ಲಿ ಸಿಗುವ ತರಕಾರಿಗಳು ಗಾಜಾ ಪಟ್ಟಿಯಲ್ಲೂ ಇವೆಯಂತೆ. ಆದರೆ, ಕನ್ನಡ ಭಾಷಾ ಸಮಸ್ಯೆಯಿಂದಾಗಿ ತರಕಾರಿಗಳನ್ನು ಕೊಳ್ಳಲು ಸಮಸ್ಯೆ ಆಗುತ್ತಿದೆಯಂತೆ. ಸ್ವತಃ ಅಡುಗೆ ಮಾಡುವ ನಿದಾಲ್, ಸ್ನೇಹಿತರೊಟ್ಟಿಗೆ ಕುಳಿತು ಊಟ ಮಾಡುತ್ತಾರೆ. "ನಮ್ಮಲ್ಲಿ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವ ಸಂಪ್ರದಾಯವಿದೆ. ಆದರೆ ಇಲ್ಲಿ ಆ ಸಂಸ್ಕೃತಿ ಕಡಿಮೆ" ಎನ್ನುವುದು ಅವರ ಅನಿಸಿಕೆ. ನಿದಾಲ್ ಒಳ್ಳೆಯ ನಟರೂ ಹೌದು. ಶೇಕ್ಸ್‌ಪಿಯರ್ ರಚನೆಯ ನಾಟಕವೊಂದರಲ್ಲಿ ಅಭಿನಯಿಸಿ, ನಿರ್ದೇಶಕರಿಂದ ಮೆಚ್ಚುಗೆ ಪಡೆದಿದ್ದಾರಂತೆ. "ನೀವು ಒಳ್ಳೆಯ ನಟ. ಇದೇ ಕ್ಷೇತ್ರದಲ್ಲಿ ಮುಂದುವರಿದರೆ ಅತ್ಯುತ್ತಮ ನಟರಾಗುತ್ತೀರಿ' ಎಂದು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರಂತೆ. ಅಲ್ಲದೆ, ಉಡುಗೊರೆಯನ್ನೂ ಕೊಟ್ಟಿದ್ದಾರಂತೆ.

ಶಿಕ್ಷಣ ಮುಗಿಸಿ ತಮ್ಮ ನಾಡಿಗೆ ಹೋಗಿ, ಅಲ್ಲಿರುವ ಕುಟುಂಬದ ಸದಸ್ಯರನ್ನು ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ದು, ನೆಲೆ ಕಲ್ಪಿಸುವ ಮಹತ್ವಾಕಾಂಕ್ಷೆ ನಿದಾಲ್ ಅವರದ್ದು. ಹಾಗೆಯೇ, ಯುದ್ಧವೆಂಬ ಯಮಕಿಂಕರನಿಂದ ಬಿಡುಗಡೆ ಬಯಸಿ, ಶಾಂತಿಯನ್ನು ಅರಸಿ ಹೋಗುತ್ತಿದ್ದಾರೆ.

■ ಎನ್. ನವೀನ್ ಕುಮಾರ್